ಶ್ರೀಮತಿ ಎಂ.ಕೆ. ನಾಗಮಣಿ(ಕಿರುಗಾವಲು):– ಮಾನ್ಯ ಉಪಾಧ್ಯಕ್ಷರೆ, ದಿನನಿತ್ಯ ಮಹಿಳೆಯರ ಮೇಲೆ ದೌರ್ಜನ್ಯ ಹಾಗೂ ಅತ್ಯಾಚಾರಗಳು ನಡೆಯುತ್ತಿವೆ. ಇದರ ಬಗ್ಗೆ ಚರ್ಚೆ ಮಾಡಬೇಕಾದರೆ ಯಾವುದಾದರೂ ಒಂದು ನಿಯಮದ ಅಡಿಯಲ್ಲೆ ಒಂದರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ನಿಜವಾಗಲೂ ಇದರ ಬಗ್ಗೆ ಚರ್ಚೆ ಮಾಡಿ ಕರ್ನಾಟಕ ರಾಜ್ಯದಲ್ಲಿ ಮಹಿಳೆಯರ ಮೇಲೆ ಆಗುತ್ತಿರುವ ಅತ್ಯಾಚಾರ ವಿಷಯದಲ್ಲೆ ಸರ್ಕಾರಕ್ಕೆ ಕಾಳಜಿ ಇದೆಯೇ? ಯಾವ ರೀತಿ ಬಗೆಹರಿಸುತ್ತದೆ ಎಂದು ತಿಳಿದುಕೊಳ್ಳಬೇಕಾಗಿದೆ.

ಶ್ರೀಮತಿ ಶಕುಂತಲಾ ಟಿ ಶೆಟ್ಟಿ (ಪುತ್ತೂರು):– ಮಾನ್ಯ ಉಪಾಧ್ಯಕ್ಷರೆ, 31/2 ವರ್ಷದ 22 ಸಾವಿರ ಕೇಸುಗಳು ದಾಖಲಾಗಿವೆ. ಶಿಡ್ಲಘಟ್ಟದ್ದು ಎಲ್ಲಾ ಸಾರ್ವಜನಿಕರ ಗಲಾಟೆಯಾದ ಮೇಲೆ ದಾಖಲೆ ಯಾಯಿತು ಎಂದರೆ ದಾಖಲಾಗದ ಕೇಸುಗಳು ಅಷ್ಟೇ ಸಾವಿರ ಇರಬಹುದು. ಆದುದರಿಂದ ಇಂತಹ ಪರಿಸ್ಥಿತಿಯಲ್ಲಿ ಇದು ಚರ್ಚೆಯಾಗಬೇಕೆಂದು ಕೇಳುತ್ತಿದ್ದೇವೆ.

ಉಪಾಧ್ಯಕ್ಷರು:– ಮಾನ್ಯ ಮಂತ್ರಿಗಳು ಇದಕ್ಕೆ ರಿಪ್ಲೈ ಕೊಡುತ್ತೀರಾ?

ಡಾ:ಹೆಚ್.ಸಿ. ಮಹದೇವಪ್ಪ:– ಮಾನ್ಯ ಉಪಾಧ್ಯಕ್ಷರೆ, ಇದು ಸೂಕ್ಷ್ಮ ಮತ್ತು ಬಹಳ ಪ್ರಮುಖವಾದ ಸಂಗತಿಯಾಗಿರುವುದರಿಂದ ಇದನ್ನು ಬೇರೆ ರೂಪದಲ್ಲಿ ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಕೊಟ್ಟರೆ ಸರ್ಕಾರ ಕೂಡ ಅದಕ್ಕೆ ಉತ್ತರ ಕೊಡುವುದಕ್ಕೆ ಸಿದ್ಧವಿದೆ. ಹಾಗೂ ಪರಿಹಾರ ಕಂಡುಕೊಳ್ಳುವುದಕ್ಕೆ ಎಲ್ಲರೂ ಸೇರಿ ಪ್ರಯತ್ನ ಮಾಡೋಣ.

ಶ್ರೀಮತಿ ಎಂ.ಕೆ. ನಾಗಮಣಿ:– ಮಾನ್ಯ ಅಧ್ಯಕ್ಷರೆ, ಯಾವಾಗ ಚರ್ಚೆಗೆ ಅವಕಾಶ ಮಾಡಿಕೊಡುತ್ತೀರಿ ಎಂದು ಕೇಳುತ್ತಿದ್ದೇವೆ.

ಉಪಾಧ್ಯಕ್ಷರು:– ನಾಳೆ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಉಪಾಧ್ಯಕ್ಷರೆ, ತಾವು ಕಾಲ ನಿಗದಿ ಮಾಡಿ ನಿಯಮ 69ರ ಪ್ರಕಾರ ಚರ್ಚೆಗೆ ಅವಕಾಶ ಕೊಡಿ. ಇದರ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆ.

ಉಪಾಧ್ಯಕ್ಷರು:– ನಾಳೆ ಮಧ್ಯಾಹ್ನ 4 ಗಂಟೆಗೆ ಅವಕಾಶ ಕೊಡುತ್ತೇನೆ.

ವಿಷಯ: ಸಂವಿಧಾನಬದ್ಧವಲ್ಲದ ಜಿಲ್ಲಾ ಉಸ್ತುವಾರಿ ಸಚಿವರ ನೇಮಕದಿಂದ ಚುನಾಯಿತ ಶಾಸನ ಸಭೆಯ ಸದಸ್ಯರು ಸಮರ್ಪಕವಾಗಿ

ಕಾರ್ಯನಿರ್ವಹಿಸಲು ಉಂಟಾಗುತ್ತಿರುವ ತೊಂದರೆಗಳ ಬಗ್ಗೆ.

ಶ್ರೀ ಕೆ. ಜಯಪ್ರಕಾಶ ಹೆಗ್ಡೆ (ಬ್ರಹ್ಮಾವರ):– ಮಾನ್ಯ ಉಪಾಧ್ಯಕ್ಷರೆ, ನಾನು **ಶ್ರೀ ಜೆ.ಸಿ. ಮಾಧುಸ್ವಾಮಿ,** ವಾಟಾಳ್ ನಾಗರಾಜ್, ಶ್ರೀ ಶ್ರೀ ರಾಮರೆಡ್ಡಿ ಮತ್ತು ಶ್ರೀ ಗೋವಿಂದ ಎಂ. ಕಾರಜೋಳ ಹಾಗೂ ಇತರರು ಸಂವಿಧಾನಬದ್ಧವಲ್ಲದ ಜಿಲ್ಲಾ ವಸ್ತುವಾರಿ ಸಚಿವರ ನೇಮಕದಿಂದ ಚುನಾಯಿತ ಶಾಸನ ಸಭೆಯ ಸದಸ್ಯರು ಸಮರ್ಪಕವಾಗಿ ಕಾರ್ಯನಿರ್ವಹಿಸಲು ಉಂಟಾಗುತ್ತಿರುವ ತೊಂದರೆಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಗಮನವನ್ನು ಸೆಳೆಯುತ್ತೇನೆ.

ಡಾ:ಹೆಚ್.ಸಿ. ಮಹದೇವಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):– ಮಾನ್ಯ ಉಪಾಧ್ಯಕ್ಷರೆ, ಹೇಳಿಕೆಯ ಕಾ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು ನಾಳೆ ಉತ್ತರ ಕೊಡುತ್ತಾರೆ.

ಶ್ರೀ ಕೆ. ಜಯಪ್ರಕಾಶ ಹೆಗಡೆ:– ಮಾನ್ಯ ಉಪಾಧ್ಯಕ್ಷರೆ, ಉತ್ತರ ಬಂದಿಲ್ಲ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಉಪಾಧ್ಯಕ್ಷರೆ, ಇದು ಬಹಳ ಪ್ರಾಮುಖ್ಯವಾದುದು. ಈ ಬಗ್ಗೆ ಸರ್ಕಾರದ ನಿರ್ಧಾರವೇನು ಎಂದ ಅವರು ಓದುವುದಕ್ಕೆ ಮೊದಲು ಉತ್ತರದ ಕಾ ಬೇಕಲ್ಲ.

ಡಾ:ಹೆಚ್.ಸಿ.ಮಹದೇವಪ್ಪ:– ಮಾನ್ಯ ಉಪಾಧ್ಯಕ್ಷರೆ, ಇಲ್ಲೆ ಇನ್ನು ಕಾ ಕೊಟ್ಟಿಲ್ಲ. ಓದುವ ಮೊದಲು ಇದಕ್ಕೆ ನಾಳೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆಂದು ಹೇಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಮಾನ್ಯ ಉಪಾಧ್ಯಕ್ಷರೆ, ಗಮನ ಸೆಳೆಯುವ ಸೂಚನೆ ಅಜೆಂಡಾದಲ್ಲೆ ಬಂದಮೇಲೆ, ಅದಕ್ಕೆ ಉತ್ತರ ಬರಬೇಕಲ್ಲ.

ಡಾ:ಹೆಚ್.ಸಿ. ಮಹದೇವಪ್ಪ: ಮಾನ್ಯ ಉಪಾಧ್ಯಕ್ಷರೆ, ಇದಕ್ಕೆ ಉತ್ತರ ರೆಡಿಯಾಗಿದೆ. ಕಾ ಗಳನ್ನು ಸರ್ಕ್ಯೂಲೆಟ್ ಮಾಡುವುದಕ್ಕೆ ಆಗಿಲ್ಲ. ಆದುದರಿಂದ ನಾಳೆ ಮಾನ್ಯ ಮುಖ್ಯ ಮಂತ್ರಿಯವರೇ, ಇದಕ್ಕೆ ಉತ್ತರವನ್ನು ಹೇಳುತ್ತಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಉಪಾಧ್ಯಕ್ಷರೇ, ಇದು ಗಮನ ಸೆಳೆಯುವ ಸೂಚನೆಯಾಗಿದ್ದು, ನಾವು ನೋಟೀಸ್ ಅನ್ನು ಕೊಟ್ಟಿದ್ದೇವೆ. ಇದು ಅಜೇಂಡಾದಲ್ಲೂ ್ರಂಟ್ ಮಾಡಿ ಕಳುಹಿಸಿದ್ದೀರಿ. ಅದಕ್ಕೂ ಮೊದಲೇ ಸರ್ಕಾರಕ್ಕೂ ನೋಟೀಸ್ ಹೋಗಿದೆ. ಇಲ್ಲಿ ಅವರು ಬರಬೇಕು, ನಿಂತು

ಕೊಳ್ಳಬೇಕು. ನಮಗೆಲ್ಲರಿಗೂ ಆ ಕಾ ಯನ್ನು ಕೊಡಬೇಕು. ನಮಗೆ ಕ್ಲಾರಿ , ಕೇಶನ್ ಅನ್ನು ಕೇಳಲು ಅನುಕೂಲವನ್ನು ಮಾಡಿಕೊಡಬೇಕು. ಇಲ್ಲಿ ನೀವು ಉತ್ತರವನ್ನು ಕೊಡದೆ ಕ್ಲಾರಿ , ಕೇಶನ್ ಕೇಳುವುದಕ್ಕೆ ಆಗುತ್ತದೆಯೇ? ನಾವು ಪ್ರಶ್ನೆ ಮಾಡುತ್ತಿರುವಂಥಾದ್ದು, ನಿಮ್ಮ ಮಂತ್ರಿಮಂಡಲದಲ್ಲಿ ಏಕೆ ಈ ವ್ಯವಸ್ಥೆಯನ್ನು ಮಾಡಿದ್ದೀರಿ? ನಿಮಗೆ ಸಂವಿಧಾನದಲ್ಲಿ ಎಲ್ಲಿ ಅವಕಾಶವಿದೆಯೆಂದು ಕೇಳುವುದರಿಂದ, ಇಷ್ಟೊಂದು ಗಂಭೀರವಾದ ವಿಚಾರವನ್ನು ಇಷ್ಟು ಹಗುರವಾಗಿ ತೆಗೆದುಕೊಂಡರೆ ಗತಿ ಏನು?

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೇ, ಈ ವಿಷಯ ಬಹಳ ಪ್ರಾಮುಖ್ಯವಾಗಿದೆ. ಜಿಲ್ಲಾ ಮಂತ್ರಿಗಳ ಕರ್ತವ್ಯ ಏನು? ಜಿಲ್ಲಾ ಮಂತ್ರಿಗಳ ನೇಮಕಕ್ಕೆ ಯಾವುದರಲ್ಲಿ ಅವಕಾಶವಿದೆ? ಇವರ ಕರ್ತವ್ಯದ ವ್ಯಾ ಏನು? ಈ ಎಲ್ಲಾ ವಿಚಾರಗಳ ಬಗ್ಗೆ ಚರ್ಚೆಯಾಗಬೇಕಾಗಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಮಾನ್ಯ ಉಪಾಧ್ಯಕ್ಷರೆ, ಇದು ನಮಗೆ ಬೇಕಾಗಿದೆ. ನಾವು ಇವತ್ತು ಎಂ.ಎಲ್.ಎ.ಗಳಾಗಿ ಕೆಲಸವನ್ನು ಮಾಡುವುದಕ್ಕೆ ಆಗುತ್ತಾ ಇಲ್ಲ. ನಮಗೆ ವಿಲೇಜ್ ಆಗಿದೆ. ನಾವು ಇವತ್ತು ಕಾನ್‌ಸ್ಟಿಟ್ಯೂಎನ್ಸಿ, ಕೆಲಸವನ್ನು ಮಾಡುವುದಕ್ಕೆ ಆಗುತ್ತಿಲ್ಲ.

ಉಪಾಧ್ಯಕ್ಷರು: ಈಗ ಉತ್ತರ ಇದೆಯಾ?

ಡಾ:ಹೆಚ್.ಸಿ. ಮಹದೇವಪ್ಪ: ಇದೆ.

ಉಪಾಧ್ಯಕ್ಷರು ಹಾಗಾದರೆ ಉತ್ತರವನ್ನು ಓದಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಉಪಾಧ್ಯಕ್ಷರೇ, ಈಗ ಹೈಟೆಕ್ ಇರುವುದರಿಂದ ಅವೆಲ್ಲವನ್ನು ಹೈಟೆಕ್‌ನಲ್ಲಿ ಹಾಕಿರಬಹುದು. ಯಾರಿಗೂ ಉತ್ತರದ ಕಾ ಯನ್ನು ಕೊಡಬಾರದೆಂದು ಹಾಕಿರಬಹುದು.

ಉಪಾಧ್ಯಕ್ಷರು:– ಈಗ ಮಂತ್ರಿಯವರ ಹತ್ತಿರ ಉತ್ತರವಿದೆ. ಈಗ ಅವರು ಉತ್ತರವನ್ನು ಓದುತ್ತಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಈಗ ನಮಗೆ ಉತ್ತರದ ಕಾ ಯನ್ನು ಕೊಡಬೇಕು. ಅವರು ಉತ್ತರವನ್ನು ಓದುವುದಕ್ಕೆ ಆಗುವುದಿಲ್ಲ. ನಾವು ಕ್ಲಾರಿ , ಕೇಶನ್ ಅನ್ನು ಕೇಳುವುದು ಹೇಗೆ?

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಉಪಾಧ್ಯಕ್ಷರೆ, ನಮಗೆ ಉತ್ತರದ ಪ್ರತಿ ಬೇಕು.

ಉಪಾಧ್ಯಕ್ಷರು: ಮಾನ್ಯ ಮಂತ್ರಿಗಳು ಉತ್ತರ ಓದುತ್ತಾರೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಉಪಾಧ್ಯಕ್ಷರೇ, ಇಲ್ಲಿ ನಿಯಮದ ಪ್ರಕಾರ ಯಾರು ಇಲ್ಲ ನೋಟೀಸ್‌ಗೆ ಸಹಿ ಹಾಕಿದ್ದೇವೆ. ಅವರಿಗೆ ಉತ್ತರದ ಕಾ ಯನ್ನು ಕಳುಹಿಸಿ, ನಂತರ ಅವರು ಓದಬೇಕು.

ಉಪಾಧ್ಯಕ್ಷರು : ಈಗ ಅವರು ಉತ್ತರವನ್ನು ಓದಲಿ, ನಾಳೆ ಬೇಕಾದರೆ ನಿಮಗೆ ಉತ್ತರದ ಪ್ರತಿಯನ್ನು ಕೊಡಿಸೋಣ. ಇದನ್ನೆ ನಾಳೆಯೂ ಚರ್ಚೆ ಮಾಡಬೇಕೆಂದರೆ ನಾಳೆಯೂ ಚರ್ಚೆ ಮಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಉಪಾಧ್ಯಕ್ಷರೇ, ನಮಗೆ ಉತ್ತರದ ಕಾ ಗಳು ಬೇಕು, ಇಲ್ಲದಿದ್ದರೆ ನಾವು ಕ್ಲಾರಿ ಕೇಶನ್ ಅನ್ನು ಕೇಳುವುದಕ್ಕೆ ಆಗುವುದಿಲ್ಲ.

ಉಪಾಧ್ಯಕ್ಷರು: ಹಾಗಾದರೆ ಇದನ್ನು ನಾಳೆ ತೆಗೆದುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಉಪಾಧ್ಯಕ್ಷರೇ, ತಮ್ಮ ಗಮನಕ್ಕೆ ತರುವುದೇನೆಂದರೆ ಇದನ್ನು ನಿಯಮ 69ರ ಅಡಿಯಲ್ಲಿ ತೆಗೆದುಕೊಳ್ಳಿ. ದಯವಿಟ್ಟು ಮಾಡಿ, ಇದು ಬಹಳ ಪ್ರಾಮುಖ್ಯವಾದ ವಿಚಾರವಾಗಿದೆ. ಇದು ಚರ್ಚೆಯಾಗಬೇಕು.

ಡಾ.ಹೆಚ್.ಸಿ. ಮಹದೇವಪ್ಪ: ಮಾನ್ಯ ಉಪಾಧ್ಯಕ್ಷರೇ, ಎಲ್ಲವನ್ನು ನಿಯಮ 69ಕ್ಕೆ ಮಾಡುವಂತಹ ಅಗತ್ಯವಿಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ: ಬೇಡ, ಇದಕ್ಕೆ ಉತ್ತರವನ್ನು ಕೊಡಿ.

ಡಾ. ಹೆಚ್.ಸಿ. ಮಹದೇವಪ್ಪ: ಮಾನ್ಯ ಉಪಾಧ್ಯಕ್ಷರೇ, ನಾಳೆ ಉತ್ತರವನ್ನು ಕೊಡುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ನಾಳೆ ಕಾಲಿಂಗ್ ಅಟೆಂಷನ್ ಹಾಕುವುದಕ್ಕೆ ಬರುವುದಿಲ್ಲ. ಅದನ್ನು ಈಗಲೇ ಹಾಕಬೇಕು. ಇದನ್ನು ಪೋಸ್ಟ್‌ಪೋನ್ ಮಾಡುವುದಕ್ಕೆ ಆಗುವುದಿಲ್ಲ. ತಾವು ಕರೆದಿದ್ದೀರಿ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಉಪಾಧ್ಯಕ್ಷರೇ, ಇದನ್ನು ನಿಯಮ

69ಕ್ಕೆ ಬದಲಾವಣೆಯನ್ನು ಮಾಡುವುದಾದರೆ ನಾಳೆ ಮಾಡಬಹುದು.

ಶ್ರೀ. ಜೆ.ಸಿ.ಮಾಧುಸ್ವಾಮಿ: ನೀವು ನಿಯಮವನ್ನು ಬದಲು ಮಾಡಿ, ಚರ್ಚೆಯನ್ನು ಮಾಡಬಹುದೆಂದು ಇದ್ದರೆ ಮಾತ್ರ ನಿಮಗೆ ಅವಕಾಶ ಇದೆ. ನಿಮ್ಮ ಗೌರವವೂ ಇರುತ್ತದೆ. ಈಗ ಗಮನ ಸೆಳೆಯುವ ಸೂಚನೆಯನ್ನು ಕರೆದು, ಮತ್ತೆ ಅದನ್ನು ನಾಳೆಗೆ ಹಾಕುವುದಕ್ಕೆ ಆಗುವುದಿಲ್ಲ.

ಉಪಾಧ್ಯಕ್ಷರು: ನಾಳೆ ನಿಮಗೆ ಕಾ ಯನ್ನು ಕೊಡಲಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ಆ ರೀತಿ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಕೆ. ಜಯಪ್ರಕಾಶ ಹೆಗ್ಡೆ: ಮಾನ್ಯ ಉಪಾಧ್ಯಕ್ಷರೇ, ಈಗ ಮಾನ್ಯ ಜಿ.ವಿ. ಶ್ರೀರಾಮರೆಡ್ಡಿಯವರ ಗಮನಸೆಳೆಯುವ ಸೂಚನೆಯನ್ನು ನಿಯಮ 69ರ ಅಡಿಯಲ್ಲಿ ತೆಗೆದುಕೊಂಡಿದ್ದೀರಿ. ಈಗ ಇದನ್ನು ನಾಳೆ ಜೊತೆಗೆ ತೆಗೆದುಕೊಳ್ಳಿ.

ಉಪಾಧ್ಯಕ್ಷರು: ಆಯಿತು. ನಾಳೆ ತೆಗೆದುಕೊಳ್ಳೋಣ.

ಶ್ರೀ ಜೆ.ಸಿ. ಮಾಧುಸ್ವಾಮಿ: ನಾಳೆ ಆ ರೀತಿ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ.

ಶ್ರೀ ಕೆ. ಜಯಪ್ರಕಾಶ ಹೆಗ್ಡೆ: ಮಾನ್ಯ ಉಪಾಧ್ಯಕ್ಷರೇ, ಇದನ್ನು ನಿಯಮ 69ರ ಅಡಿಯಲ್ಲಿ ತೆಗೆದುಕೊಳ್ಳುವುದಾದರೆ ನಾಳೆ ತೆಗೆದುಕೊಳ್ಳೋಣ.

ಶ್ರೀ ಜೆ.ಸಿ. ಮಾಧುಸ್ವಾಮಿ: ಇದನ್ನು ಬೇರೆ ನಿಯಮದಡಿಯಲ್ಲಿ ತೆಗೆದುಕೊಳ್ಳುವುದಾದರೆ ತಮ್ಮ ತಕರಾರು ಏನೂ ಇಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಮಾನ್ಯ ಉಪಾಧ್ಯಕ್ಷರೇ, ಇದನ್ನು ನಿಯಮ 69 ಅಡಿಯಲ್ಲೆ ತೆಗೆದುಕೊಳ್ಳಿ.

ಶ್ರೀ ಜೆ.ಸಿ.ಮಾಧುಸ್ವಾಮಿ: ತಾವು ಇದನ್ನು ನಿಯಮ 69ರ ಅಡಿಯಲ್ಲಿ ತೆಗೆದುಕೊಳ್ಳುತ್ತೀರಾ ಅದನ್ನು ಹೇಳಿ.

ಉಪಾಧ್ಯಕ್ಷರು: ನಿಯಮ 69ರ ಅಡಿಯಲ್ಲಿ ತೆಗೆದುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್: ಆಯಿತು.

ಉಪಾಧ್ಯಕ್ಷರು: ಈಗ ವಿತ್ತೀಯ ಕಾರ್ಯ ಕಲಾಪಗಳನ್ನು ತೆಗೆದುಕೊಳ್ಳೋಣ.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಉಪಾಧ್ಯಕ್ಷರೇ, ಇವತ್ತು ಇಲ್ಲಿಗೆ

ಸಭೆಯನ್ನು ಮುಕ್ತಾಯಗೊಳಿಸಿ. ನಾಳೆ ಬೇಕಾದರೆ 10 ಗಂಟೆಗೆ ಸಭೆಯನ್ನು ಪ್ರಾರಂಭ ಮಾಡಿ. ಇಲ್ಲಿ ನಾವು 7–8ಗಂಟೆಗಳ ಕಾಲ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲಯ ಇಲ್ಲಿ ಹೊರಗೆ ಹೋಗಿ ಬರುವವರಿಗೆ ಸರಿಯಾಗುತ್ತದೆ. ನಮಗೆ ಇಲ್ಲಿ ಕೂಲಿ ಮಾಡಿದ ಹಾಗೆ ಆಗುತ್ತಾ ಇದೆ. ಕೂಲಿ ಮಾಡುವವರಿಗೂ ಇಷ್ಟೊಂದು ಶ್ರಮವಾಗುವುದಿಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಉಪಾಧ್ಯಕ್ಷರೇ, ಇಲ್ಲಿ ಯಾರು ಸಚಿವರು ಅಲ್ಲ. ವಿತ್ತೀಯ ಕಾರ್ಯಕಲಾಪಗಳ ಬಗ್ಗೆ ಮಾತನಾಡಿದರೆ, ಸಂಬಂಧಪಟ್ಟಂತಹ ಶಿಕ್ಷಣ ಸಚಿವರು, ಕೃಷಿ ಸಚಿವರು ಇಲ್ಲ, ತೋಟಗಾರಿಕೆಯ ಸಚಿವರು ಇಲ್ಲ.

ಉಪಾಧ್ಯಕ್ಷರು: ಇದು ಬಹಳ ದಿವಸಗಳಿಂದ ಪೆಂಡಿಂಗ್ ಇದೆ. ಮತ್ತೆ ಅಧ್ಯಕ್ಷರು ಸಹ ಸಂಜೆ 7 ಗಂಟೆಯವರೆಗೂ ಸದನವನ್ನು ನಡೆಸಲು ಹೇಳಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, ಆಗುವುದಿಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಉಪಾಧ್ಯಕ್ಷರೇ, ಇಲ್ಲಿ ತೋಟಗಾರಿಕೆ ಸಚಿವರು, ಕೃಷಿ ಸಚಿವರು ಯಾರೂ ಇಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಉಪಾಧ್ಯಕ್ಷರೇ, ಇಲ್ಲಿ ಡಿಮಾಂಡ್ಸ್ ಮೇಲೆ ಚರ್ಚೆ ಮಾಡುವಾಗ ಸಂಬಂಧಪಟ್ಟ ಸಚಿವರು ಇಲ್ಲದೇ ಹೋದರೆ ಹೇಗೆ ಮಾತನಾಡುವುದು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಉಪಾಧ್ಯಕ್ಷರೇ, ಕ್ಷಮೆ ಕೇಳಿ

ಶ್ರೀ ಜೆ.ಸಿ.ಮಾಧುಸ್ವಾಮಿ : ಮಾನ್ಯ ಉಪಾಧ್ಯಕ್ಷರೇ, ಇಲ್ಲಿ ಕೃಷಿ ಸಚಿವರು ಇಲ್ಲ, ತೋಟಗಾರಿಕೆ ಸಚಿವರು ಇಲ್ಲ. ಇವುಗಳ ಮೇಲೆ ಚರ್ಚೆ ಮಾಡುವುದು ಹೇಗೆ?

ಉಪಾಧ್ಯಕ್ಷರು: ಈಗ ಚರ್ಚೆ ತಾನೆ, ಅದನ್ನು ಮುಂದುವರೆಸಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಉಪಾಧ್ಯಕ್ಷರೇ, ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಬೇಕಲ್ಲಾ, ಉತ್ತರವನ್ನು ಕೊಡುವವರು ಯಾರು?

ಉಪಾಧ್ಯಕ್ಷರು: ಅಧ್ಯಕ್ಷರು ಹೇಳಿದ್ದಾರೆ.

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಉಪಾಧ್ಯಕ್ಷರೇ, ಸಚಿವರೇ

ಇಲ್ಲ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಉಪಾಧ್ಯಕ್ಷರೇ, ತಾವು ದಯಮಾಡಿ ನಾಳೆ ಬೆಳಿಗ್ಗೆ ಹಾಕಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಉಪಾಧ್ಯಕ್ಷರೇ, ಇಲ್ಲಿ ಕೃಷಿ ಸಚಿವರೇ ಇಲ್ಲ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಉಪಾಧ್ಯಕ್ಷರೇ, ಇಲ್ಲಿ ಕೃಷಿ ಸಚಿವರು ತೋಟಗಾರಿಕಾ ಸಚಿವರು, ಶಿಕ್ಷಣ ಸಚಿವರು ಯಾರು ಇಲ್ಲ. ಮೊನ್ನೆ ದಿವಸ ಉನ್ನತ ಶಿಕ್ಷಣ ಸಚಿವರು ಇದ್ದರು. ಇವತ್ತು ಯಾವ ಸಚಿವರು ಇಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಉಪಾಧ್ಯಕ್ಷರೇ, ನಾವು ಯಾರು ತಯಾರಾಗಿ ಇಲ್ಲ. ನಾಳೆಗೆ ತೆಗೆದುಕೊಳ್ಳಿ.

ಉಪಾಧ್ಯಕ್ಷರು: ಈಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಿಗ್ಗೆ 11.00 ಗಂಟೆಗೆ ಸೇರುವುದು.

(ಸದನವು ಸಂಜೆ 6 ಗಂಟೆ 4 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 12ನೇ ಜುಲೈ ಮಾಹೆ 2005ರ ಮಂಗಳವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)

ಕಾ.ಸೂ. 97 ಸ.ಪ.ಪು.ಮು.ಪ್ರೆ. 360 ಪ್ರತಿಗಳು ದಿ : 16-09-2009